ಶಿಕ್ಷಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ಇಲಾಖೆ ಕೈಗೊಂಡ ಕ್ರಮಗಳ ಕುರಿತು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ **ಎನ್.ಮಹೇಶ್** ಅವರೊಂದಿಗೆ 'ಸುಧಾ' ಸಂದರ್ಶನ.

# ಶಿಕ್ಷಕರ ಹೊರೆ ಇಳಿಕೆ, ಸರ್ಕಾರಿ ಶಾಲೆಗಳ ಗುಣಮಟ್ಟ ಏರಿಕೆ...



ಚಿತ್ರ: ಆನಂದ ಬಕ್ಷಿ

**▸ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್ ಅರ್ಜಿಯನ್ನು ಶಿಕ್ಷಕರೇ ತುಂಬಬೇಕೇ? ಅವರ ಮೇಲೇಕೆ ಇಷ್ಟೊಂದು ಹೊರೆ?**

ಸಮಾಜ ಕಲ್ಯಾಣ ಇಲಾಖೆಯು ಮಕ್ಕಳಿಗೆ ಶೈಕ್ಷಣಿಕ ವರ್ಷದ ಆರಂಭದಲ್ಲೇ ಸ್ಕಾಲರ್‌ಷಿಪ್ ದೊರೆಯುವಂತೆ ಮಾಡುವ ಸಲುವಾಗಿ ದತ್ತಾಂಶ ಸಂಗ್ರಹಕ್ಕೆ ಒಂದು ಪೋರ್ಟಲ್ ರೂಪಿಸಿದೆ. ವಿದ್ಯಾರ್ಥಿಯೊಬ್ಬ ಐದನೇ ತರಗತಿ ಓದುತ್ತಿರುವಾಗ ಆತನ ದಾಖಲೆಗಳನ್ನು ಈ ಪೋರ್ಟಲ್‌ಗೆ ಒಮ್ಮೆ ಅಪ್‌ಲೋಡ್ ಮಾಡಿದರೆ ಮುಗಿಯಿತು, ಹತ್ತನೇ ತರಗತಿವರೆಗೆ ಯಾವುದೇ ಅಡೆತಡೆಯಿಲ್ಲದೆ ಆತನಿಗೆ ಸ್ಕಾಲರ್‌ಷಿಪ್ ಸಿಗುತ್ತದೆ. ಇಂಟರ್ನೆಟ್ ಸೌಲಭ್ಯವಿಲ್ಲದೆ ಈ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಶಿಕ್ಷಕರು ಒದ್ದಾಡುತ್ತಿರುವುದು ನನ್ನ ಗಮನಕ್ಕೂ ಬಂದಿದೆ.

ಶಿಕ್ಷಕರ ಮೂಲ ಕೆಲಸ ಪಾಠ ಮಾಡುವುದು. ಅದಕ್ಕೆ ಸಮಯದ ಕೊರತೆ ಎದುರಾಗುತ್ತಿದೆ. ಆದ್ದರಿಂದಲೇ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ನಾನು ಈಗಾಗಲೇ ಮಾತನಾಡಿದ್ದೇನೆ. ನಮ್ಮ ಇಲಾಖೆಯ ಬೋಧಕೇತರ ಸಿಬ್ಬಂದಿಯನ್ನು ಈ ಕಾರ್ಯಕ್ಕೆ ನಿಯೋಜಿಸಲು ಸಿದ್ಧ. ಶಿಕ್ಷಕರನ್ನು ಈ ಹೊರೆಯಿಂದ ಬಿಡುಗಡೆ ಮಾಡಬೇಕು ಎಂದು ಸೂಚಿಸಿದ್ದೇನೆ.

ಶಿಕ್ಷಕರ ಮೇಲಿನ ಇತರ ಹೊರೆಗಳೂ ಕಡಿಮೆ ಆಗಬೇಕು. ಈ ನಿಟ್ಟಿನಲ್ಲಿ ಹೇಗೆ ಹೆಜ್ಜೆ ಇಡುವುದು ಎಂಬುದನ್ನು ಶಿಕ್ಷಣತಜ್ಞರು, ಸಂಘಟನೆಗಳ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಭೆ ಕರೆದು ನಿರ್ಧರಿಸುತ್ತೇವೆ. ಮೇಷ್ಟ್ರುಗಳ ಮೇಲಿನ ಭಾರವನ್ನು ಖಂಡಿತಾ ಇಳಿಸಲಿದ್ದೇವೆ. ಅವರು ತರಗತಿಗಳಲ್ಲಿಯೇ ಸಮಯ ಕಳೆಯಲು ಅವಕಾಶ ಮಾಡಿಕೊಡಲಿದ್ದೇವೆ.

**▸ ಶಿಕ್ಷಕರ ಕೊರತೆಯೂ ಅವರ ಮೇಲಿನ ಹೊರೆ ಹೆಚ್ಚಿಸಿಲ್ಲವೇ?**

ಹೌದು, ಶಿಕ್ಷಕರ ಕೊರತೆ ತೀವ್ರವಾಗಿದೆ. ಎರಡು ವರ್ಷಗಳಲ್ಲಿ 25 ಸಾವಿರ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲು ಉದ್ದೇಶಿಸಿದ್ದೇವೆ. ಆ ನಿಟ್ಟಿನಲ್ಲಿ ಈಗಾಗಲೇ ಕೆಲಸಗಳು ನಡೆದಿವೆ.

**▸ ಈ ಸಲವಾದರೂ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ನಡೆಯುವುದೇ?**

**ವರ್ಗಾವಣೆಯಲ್ಲಿ ರಾಜಕೀಯ ಹಸ್ತಕ್ಷೇಪ ಇರುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ?**

ವರ್ಗಾವಣೆಗೆ ಕೌನ್ಸೆಲಿಂಗ್‌ಗಿಂತ ಉತ್ತಮ ಮಾರ್ಗ ಬೇರಿಲ್ಲ. ಹಿಂದೆ ಏನೇನೋ ಕಾರಣಗಳಿಂದ ವರ್ಗಾವಣೆ ಪ್ರಕ್ರಿಯೆ ಸ್ಥಗಿತಗೊಂಡಿರಬಹುದು. ಈ ಸಲ ಕೌನ್ಸೆಲಿಂಗ್‌ಗೆ ಈಗಾಗಲೇ ವೇಳಾಪಟ್ಟಿ ಪ್ರಕಟಿಸಿದ್ದೇವೆ. ಅದರಂತೆಯೇ ಎಲ್ಲ ಪ್ರಕ್ರಿಯೆ ಅಚ್ಚುಕಟ್ಟಾಗಿ ನಡೆಯಲಿದೆ. ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶವೇ ಇಲ್ಲ. ಹಾಗೆ ವಸೂಲಿಯಿಂದ ವರ್ಗವಾದ ಮಾಹಿತಿ ಸಿಕ್ಕರೆ ಕೊಡಿ, ಕ್ರಮ ಕೈಗೊಳ್ಳುತ್ತೇನೆ.

**▸ ಶಿಕ್ಷಕರ ಸಂಘ 32 ಅಂಶಗಳ ಬೇಡಿಕೆ ಇಟ್ಟಿದೆಯಲ್ಲ?**

ಸಂಘದ ಪದಾಧಿಕಾರಿಗಳಿಗೂ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಕಾನೂನು ಚೌಕಟ್ಟಿನಲ್ಲಿ ಯಾವೆಲ್ಲ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವೋ ಅವುಗಳನ್ನು ಇಲಾಖೆ ಖಂಡಿತಾ ಮಾನ್ಯ ಮಾಡಲಿದೆ. ಶಿಕ್ಷಕರು ಖುಷಿಯಿಂದ ಕೆಲಸ ಮಾಡಬೇಕು ಎನ್ನುವುದು ನನ್ನ ಅಪೇಕ್ಷೆ.

**▸ ಗುಣಾತ್ಮಕ ಶಿಕ್ಷಣ ಎಂದು ಕೇವಲ ಬಾಯಿಯಲ್ಲಿ ಪಠಿಸಿದರೆ ಸಾಕೇ?**

ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸುವುದೇ ನಮ್ಮ ಮೊದಲ ಆದ್ಯತೆಯಾಗಿದೆ. ಕಡ್ಡಾಯ ಶಿಕ್ಷಣ ಹಕ್ಕು ಜಾರಿಯಲ್ಲಿದೆಯೇ ಹೊರತು ಗುಣಾತ್ಮಕ ಶಿಕ್ಷಣ ನೀಡುವತ್ತ ಹೆಚ್ಚಿನ ಕ್ರಮಗಳನ್ನು ಕೈಗೊಂಡಿಲ್ಲ. ಇಡೀ ಶಿಕ್ಷಣ ವ್ಯವಸ್ಥೆಯನ್ನು ಮಕ್ಕಳ ಕೇಂದ್ರಿತವಾಗಿ ರೂಪಿಸಬೇಕೆನ್ನುವುದು ನಮ್ಮ ಬಯಕೆ. ಗುಣಾತ್ಮಕ ಶಿಕ್ಷಣದ ಗುರಿ ಈಡೇರಲು ಶಿಕ್ಷಕರಲ್ಲೂ ಕೆಲವು ಬದಲಾವಣೆಗಳು ಆಗಬೇಕಿದೆ. ಅವರಿಗೆ ಉತ್ತೇಜನ ತುಂಬಲು, ಹೊಸ ಕೌಶಲ